ಆದಾಕ್ಷಣ ಲಾಗೌಟ್ ಮಾಡುವುದನ್ನು ಮರೆಯದಿರಿ.

- ನಿಯಮಿತವಾಗಿ ಪಿನ್ ನಂಬರ್ ಬದಲಾಯಿಸುತ್ತಿರಿ.
- ನಿಮ್ಮ ಕಂಪ್ಯೂಟರ್ ಅನ್ನು 'ವೈರಸ್ ಪ್ರೊಟೆಕ್ಷನ್'ನಲ್ಲಿಡಿ. ಸ್ಪೈವೇರ್ ಮತ್ತು ಮಾಲ್‌ವೇರ್ ಡಿಟೆಕ್ಷನ್ ಬಳಸಿರಿ.
- ಎಟಿಎಂ ಬಳಸುವಾಗ ಅನುಮಾನ ಬಂದಲ್ಲಿ ನಿಮ್ಮ ವ್ಯವಹಾರವನ್ನು ಕ್ಯಾನ್ಸಲ್ ಮಾಡಿ, ಜಾಗ ಖಾಲಿ ಮಾಡಿ.
- ಆನ್‌ಲೈನ್ ವಹಿವಾಟು ಇದ್ದಾಗ ಆಗಾಗ್ಗೆ ಬ್ಯಾಂಕ್ ವಹಿವಾಟುಗಳನ್ನು ಪರಿಶೀಲಿಸುತ್ತಿರಿ. ಎಷ್ಟು ಸಲ ಕಾರ್ಡ್ ಬಳಸಿದ್ದೀರಿ, ಎಷ್ಟು ಹಣ ಕಟ್ ಆಗಿದೆ, ಎಷ್ಟು ಜಮಾ ಆಗಿದೆ ಎನ್ನುವುದರ ಬಗ್ಗೆ ಕಣ್ಣಿಟ್ಟಿರಿ.
- ಎಟಿಎಂ ಕಾರ್ಡ್ ಮತ್ತು ರಶೀದಿಗಳನ್ನು ಜೋಪಾನವಾಗಿ ಇಟ್ಟುಕೊಂಡಿರಿ. ಪ್ರತಿ ತಿಂಗಳ ಕೊನೆಗೂ ಟ್ಯಾಲಿ ಮಾಡಿಕೊಳ್ಳಿ.
- ವಿದೇಶ ಪ್ರವಾಸ ಹೋಗುವುದಾದರೆ ನಿಮ್ಮ ಬ್ಯಾಂಕ್ ಸಿಬ್ಬಂದಿಗೆ ಮಾಹಿತಿ ನೀಡಿ. ಅಲ್ಲಿ ಕಾರ್ಡ್ ಬಳಸಬಹುದೆ ಎನ್ನುವುದರ ಬಗ್ಗೆ ಸಲಹೆ ಕೇಳಿ.
- ವಿದೇಶಗಳಲ್ಲಿ ಡೆಬಿಟ್ ಕಾರ್ಡ್ ಬಳಸಿದರೆ ವಿನಿಮಯ ದರದಲ್ಲಿ ನಿಮಗೆ ಲಾಭ ಆಗಬಹುದು. ಆದರೆ ವಿದೇಶದಿಂದ ಮರಳಿದ ಬಳಿಕ ಪಿನ್ ನಂಬರ್ ಬದಲಾಯಿಸಿಕೊಳ್ಳಿ.
- ನಾಲ್ಕು ಅಂಕೆಯ ಪಿನ್ ಎಲ್ಲ ದೇಶಗಳಲ್ಲೂ ಹೆಚ್ಚು ಸುರಕ್ಷಿತ. ಅನುಮಾನ ಬಂದಲ್ಲಿ ಅಥವಾ ಹೆಚ್ಚುವರಿ ವಹಿವಾಟಿನ ಮಾಹಿತಿ ಬಂದಲ್ಲಿ ತಕ್ಷಣ ಬ್ಯಾಂಕ್ ಸಿಬ್ಬಂದಿಯನ್ನು ಸಂಪರ್ಕಿಸಿ. ನಿಮ್ಮ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ಪ್ರತಿಯೊಂದು ಮಾಹಿತಿಯೂ ಬರುವಂತೆ ನೋಡಿಕೊಳ್ಳಿ.
- ನಿಮ್ಮ ಹಣಕಾಸು ವಹಿವಾಟಿನ ವಿವರಗಳನ್ನು ಫೋನ್ ಅಥವಾ ಇಮೇಲ್ ಮೂಲಕ ಯಾರ ಜತೆಗೂ ಹಂಚಿಕೊಳ್ಳಬೇಡಿ.
- ಮಳಿಗೆಗಳಲ್ಲಿ ನಿಮ್ಮ ಕಾರ್ಡ್ ಅನ್ನು ಮಾರಾಟಗಾರ ಸ್ವೈಪ್ ಮಾಡುವಾಗ ನೀವು ಎದುರಲ್ಲೇ ಇರಿ. ನಿಮ್ಮ ಅನುಪಸ್ಥಿತಿಯಲ್ಲಿ ಅವರು ಕಾರ್ಡ್ ಸ್ವೈಪ್ ಮಾಡುವುದು ಬೇಡ.
- ನಿಮ್ಮ ಹೆಂಡತಿ, ಮಕ್ಕಳ ಹೆಸರನ್ನು ಪಾಸ್‌ವರ್ಡ್ ಆಗಿ ಬಳಸಬೇಡಿ.
- ಪಿನ್ ನಂಬರ್ ಸದಾ ಸ್ಮರಣೆಯಲ್ಲಿ ಇರಲಿ. ಅದನ್ನು ಕಾರ್ಡ್ ಹಿಂದೆ ಅಥವಾ ಜೇಬಿನಲ್ಲಿ ಬರೆದು ಇಟ್ಟುಕೊಳ್ಳುವುದು ಸುರಕ್ಷಿತವಲ್ಲ.

ಸುಲಭಗೊಳಿಸುತ್ತಿದೆ ಎನ್ನುವುದು ನಿಜ. ಆದರೆ ಅದೇ ತಂತ್ರಜ್ಞಾನ ನಮ್ಮ ಹಣದ ಭದ್ರತೆಗೆ ಹೊಸ ಸವಾಲುಗಳನ್ನು ಒಡ್ಡಿದೆ ಎನ್ನುವುದೂ ಅಷ್ಟೇ ನಿಜ. 'ಯಾವುದೇ ವೀಸಾ ಕಾರ್ಡ್ ಇರಲಿ, ಆರೇ ಸೆಕೆಂಡ್‌ಗಳಲ್ಲಿ ಅದನ್ನು ಹ್ಯಾಕ್ ಮಾಡಬಹುದು' ಎನ್ನುವುದನ್ನು ಇತ್ತೀಚೆಗೆ ಎಥಿಕಲ್ ಹ್ಯಾಕರ್‌ಗಳು ಬ್ಯಾಂಕ್ ಅಧಿಕಾರಿಗಳ ಮುಂದೆಯೇ ಸಾಬೀತು ಮಾಡಿ ತೋರಿಸಿದ್ದಾರೆ! ಅಷ್ಟೊಂದು ವೇಗವಾಗಿ ಕೆಲಸ ಮಾಡುವ ಸಾಫ್ಟ್‌ವೇರ್‌ಗಳು ಬಂದಿವೆ, ಅವುಗಳನ್ನು ವಂಚಕರೂ ಬಳಸಬಹುದು.

ಶಾಸನಕರ್ತರು ಮತ್ತು ಬ್ಯಾಂಕಿಂಗ್ ಸಂಸ್ಥೆಗಳು ಎಟಿಎಂ ಕಾರ್ಡಿನ ಸುರಕ್ಷತೆಯ ಬಗ್ಗೆ ಎಷ್ಟೇ ಭರವಸೆ ನೀಡಿದರೂ ಗ್ರಾಹಕರ ಮನಸ್ಸಿನಲ್ಲಿ ಭದ್ರತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಅನುಮಾನಗಳು ಇದ್ದೇ ಇವೆ. ತಂತ್ರಜ್ಞಾನ ಹೆಚ್ಚು ಬೆಳೆದಿರುವುದು ಎರಡು ಅಲಗಿನ ಕತ್ತಿಯಂತೆ. ಅದನ್ನು ಸುರಕ್ಷತೆಗೂ ಬಳಸಬಹುದು; ವಂಚನೆಗೂ ಬಳಸಬಹುದು. ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ವಂಚಕರು ಹೊಸ ರೀತಿಯ ಮೋಸಗಳನ್ನು ನಡೆಸುತ್ತಿರುವುದು ಬೆಳಕಿಗೆ ಬರುತ್ತಿದೆ. ಭದ್ರತಾ ಕ್ರಮಗಳನ್ನು ಹೆಚ್ಚಿಸಿದಷ್ಟೂ ವಂಚನೆಗಳ ಸಂಖ್ಯೆ ಜಾಸ್ತಿಯಾಗುತ್ತಲೇ ಇದೆ.

ಎಟಿಎಂ ಕಾರ್ಡ್‌ಗಳಲ್ಲಿ 'ಸ್ಕಿಮ್ಮಿಂಗ್' ಮತ್ತು 'ಕ್ಲೋನಿಂಗ್' ಎಂಬ ಎರಡು ರೀತಿಯ ವಂಚನೆಗಳು ಇತ್ತೀಚಿನ ವರ್ಷಗಳಲ್ಲಿ ವರದಿಯಾಗಿವೆ. ಮೊದಲನೆಯದು ಮಾದರಿಯ ಅಪರಾಧಗಳೇ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ. ಗ್ರಾಹಕರು ಎಟಿಎಂ ಕಾರ್ಡ್ ತೂರುವ ಸ್ಥಳದಲ್ಲೇ ವಂಚಕರು



